*ಗೀತಾ ಬರ್ಲ, ಅಮ್ಮೆ*
*ಕಳ್ಳರು ಯಾವಾಗಲೂ ಕಪ್ಪು ಬಟ್ಟೆಗಳನ್ನೇ ಧರಿಸಲು ಕಾರಣವೇನು?*



ಕರಾಳವಾದ ಕೆಲಸಗಳಿಗೆ ಮ್ಯಾಚಿಂಗ್ ಆಗಲೆಂದು!

*ರವಿ ಮಂಜುನಾಥ ಪೈ, ಹೊನ್ನಾವರ*
*ಜೀವನ ಒಂದು ಜೋಕಾಲಿ ಎನ್ನುವುದೇಕೆ?*
ಜೋಕೆ ಇರದಿದ್ದರೆ ಎಲ್ಲವೂ ಖಾಲಿ ಆಗುವುದರಿಂದ!

*ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ*
*ವರ್ಷವೆಲ್ಲಾ ಆರೋಗ್ಯವಾಗಿರುವ ಮುಖಂಡರು ಬಂಧನಕ್ಕೊಳಗಾದ ತಕ್ಷಣ ಎದೆನೋವಿನಿಂದ ನರಳುತ್ತಾರಲ್ಲಾ, ಏಕೆ?*
ಅಧಿಕಾರವೆಂಬ ಪ್ರಾಣಪಕ್ಷಿ ಹಾರಿಹೋಗುವಂತಾಗುವುದರಿಂದ!

*ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ*
*ರಾಜರಿಗೆ ಗಾಳಿ ಹಾಕಲು ಹೆಂಡತಿ ಏಕೆ ಬೇಡ, ದಾಸಿಯರೇಕೆ ಬೇಕು?*
ಹೆಂಡತಿ ಹಾಕುವುದು ಗಾಳಿಯಲ್ಲ, ಗಾಳ!

*ಜಾಕೋಬ್ ಡಿಸೋಜ, ಕುರುವಳ್ಳಿ*
*ರಾಜಕೀಯ ಏಕೆ ಹೊಲಸಾಗಿದೆ?*
ಏಕೆಂದರೆ ಕೊಳೆ ಹುಲುಸಾಗಿದೆ!

*ರಘುನಾಥ ತಾಪ್ಸೆ, ದಾವಣಗೆರೆ*
*ಶಾಂತಿದೂತರ ಹೆಸರಿನಲ್ಲಿ ಕ್ರಾಂತಿ ಮಾಡುವವರನ್ನು ಏನೆಂದು ಕರೆಯಬೇಕು?*



ಭ್ರಾಂತಿಭೂತ!

*ಎಂ.ಎಸ್. ಸೋಮಶೇಖರ್, ಮೈಸೂರು*
*ಅಕ್ಷಯ ತೃತೀಯದಂದು ಚಿನ್ನ ಕೊಳ್ಳಲೇಬೇಕೆಂಬುದನ್ನು ನೀವು ನಂಬುತ್ತೀರಾ? ಕಾರಣಸಹಿತ ವಿವರಿಸಿ.*
ನಂಬುತ್ತೇನೆ. ನಂಬದಿದ್ದರೆ ಮನೆಯಲ್ಲಿ ಜಗಳವಾಗುವುದರಿಂದ!

*ಗಾಯತ್ರಿ, ರಾಜಾಜಿನಗರ*
*ಹಾಲುಮನಸ್ಸಿನ ಹಾಲಪ್ಪ ಹಾಲು ಕುಡಿದು ಹಾಲ್‌ನಲ್ಲೇ ಇರುವ ಬದಲು ರೂಮ್‌ಗ್ಯಾಕೆ ಹೋದರು?*
ಆಗ ಮಾತ್ರ ಹಾಲುಮನಸ್ಸು ಹಾಳುಮನಸ್ಸಾಗಿತ್ತಂತೆ!

*ನೇ.ಗೋ.ಭ, ಕುಕ್ಕೆ ಸುಬ್ರಮಣ್ಯ*
*ಉತ್ತಮ ಪ್ರಶ್ನೆಗೆ ಬಹುಮಾನ ಕೊಡುವಂತೆ, ಜಾಣ್ಮೆಯ ಉತ್ತರಕ್ಕೆ ಏನು ಬಹುಮಾನ ಕೊಡಲಿ ರಾಮ್‌ಜೀ?*
ಮತ್ತಷ್ಟು ಉತ್ತಮ ಪ್ರಶ್ನೆಗಳನ್ನೇ ಕೊಟ್ಟುಬಿಡಿ!

*ಡಿ.ಎಲ್.ಶ್ವೇತಾ, ಚನ್ನಗಿರಿ*
*ಚಂಡಮಾರುತಕ್ಕೆ ಲೈಲಾ ಎಂಬ ಹೆಸರು ಸೇರಿಕೊಂಡದ್ದು ಏಕೆ?*
Lie ಮತ್ತು law ಗಳಷ್ಟೇ ಎಡವಟ್ಟನ್ನು ಆ ಗಾಳಿಯೂ ಮಾಡುವುದರಿಂದ!

*ಎ.ಕೆ. ಪಟ್ಟಾಭಿ, ಬೆಂಗಳೂರು*
*ಗಂಡಸಿಗಿಂತ ಹೆಂಗಸೇ ದೀರ್ಘಾಯುಷಿಯಂತಲ್ಲಾ...?*
ಕಡೆಯ ದಿನಗಳಲ್ಲಾದರೂ ಗಂಡನ ಕಾಟ ತಪ್ಪಿ ನೆಮ್ಮದಿ ಇರಲೆಂದು ಪ್ರಕೃತಿ ನೀಡಿದ ಕೊಡುಗೆಯಂತೆ!

*ಜೆ.ಪ್ರದೀಪಕುಮಾರ, ಹೂವಿನಹಡಗಲಿ*
*ಅನುಭವದಿಂದ ಕವಿಗಳಾಗುವುದಕ್ಕೂ, ಹುಟ್ಟಿನಿಂದ ಕವಿಗಳಾಗುವುದಕ್ಕೂ ಏನು ವ್ಯತ್ಯಾಸ?*
ಹುಟ್ಟಿನಿಂದ ಕವಿ, ಪಂಡಿತ ಆಗಬೇಕಾದರೆ ಅವು ಅವನ ಸರ್‌ನೇಮ್ ಆಗಿರಬೇಕಷ್ಟೆ.

*ಎಚ್.ಆರ್.ದೇಸಾಯಿ, ರಾಯಚೂರು*
*ಜನರು ರಾಜಕಾರಣಿಗಳ ಹಸ್ತಾಕ್ಷರ ಪಡೆಯಲು ಏಕೆ ಮುಗಿಬೀಳುವುದಿಲ್ಲ?*
ಎಷ್ಟೋ ರಾಜಕಾರಣಿಗಳು ಹೆಬ್ಬೆಟ್ಟುಗಳು ಎಂದು ತಿಳಿದಿರುವುದರಿಂದ!

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ನಿವೃತ್ತಿಯ ಲಾಗಾಯ್ತು ಸರಿಯಾಗಿ ನಿದ್ರೆಯೇ ಬರುತ್ತಿಲ್ಲವಲ್ಲಾ...?*
ಕೂಡಲೆ ಕಚೇರಿಯ ಕುರ್ಚಿಯನ್ನು ತರಿಸಿ ಅದರಲ್ಲಿ ಕುಳಿತುಕೊಳ್ಳಿ!

*ಹೆಚ್.ಎಸ್.ಶಿವಶಂಕರ್, ಬೆಂಗಳೂರು*
*ಸಿಟಿಬಸ್‌ಗೆ ಕಾಯುವ ಕೆಲವರು ಬಸ್ ಬಂದಾಗ ಅದರ ಹಿಂದಿನ ಬಸ್‌ನ ಬೋರ್ಡನ್ನು ನೋಡುವುದೇಕೆ?*
ಹಿಂದುಳಿದ ಬಸ್ ಆದ್ದರಿಂದ ಹೆಚ್ಚಿನ ಸೌಲಭ್ಯಗಳು ಸಿಗಬಹುದೆಂದು!

## ಬಹುಮಾನಿತ ಪ್ರಶ್ನೆ

ಭಾರತಿ ಮಾನಗೆ, ಹೊನ್ನಾವರ
ಭೂಮಿಯನ್ನು ತಾಯಿಗೆ ಹೋಲಿಸುವುದೇಕೆ?
ಗುಟ್ಕಾ ಹಾಕಿಕೊಂಡು ಉಗಿದರೂ ಸಹಿಸಿಕೊಳ್ಳುವುದರಿಂದ!

*ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ*
*ನಮ್ಮ ರಾಜಕಾರಣಿಗಳಿಗೆ ಹಠ ಮುಖ್ಯವೋ, ಮಠ ಮುಖ್ಯವೋ?*
ಎರಡೂ ಅಲ್ಲ; ಪೀಠ!

*ಅಶ್ವಿನಿ ಎ. ಹೆಗಡೆ, ಬೈರುಂಬೆ*
*ಧರ್ಮಗುರುಗಳಿಗೂ, ಅಧಮ ರಾಜಕಾರಣಿಗಳಿಗೂ ಎತ್ತಣಿಂದೆತ್ತಣ ಸಂಬಂಧ?*
ಇಬ್ಬರಿಗೂ ಮತವೇ ಮುಖ್ಯ!

*ಟೈಗರ್ ರಾಜೇಂದ್ರ, ದೊಡ್ಡಬಳ್ಳಾಪುರ*
*ಮಕಾಡೆ ಮಲಗುವುದು ಯಾವ ಭಾಷೆಯ ಪದ? ಲೇಟೆಸ್ಟ್ ಉದಾಹರಣೆ ಇದೆಯೇ?*
ಮುಖ ಅಡಿಯಾಗಿ ಮುಖಾಡೆ ಮಖಾಡೆ ಮಕಾಡೆ! ನಮ್ಮ ಮು.ಮಂ.ರ ಫೇವರೈಟ್ ಪೊಸಿಷನ್ ಅದು!

*ಕೃ. ನಾಗೇಶ, ಅರಸೀಕೆರೆ*
*ಸುಲಿದ ಬಾಳೆಯ ಹಣ್ಣಿನಂದದಿ ಎಂಬ ಉಪಮೆಯು ಅದೆಷ್ಟು ಸೋಮಾರಿತನವನ್ನು ಪೋಷಿಸುತ್ತದೆ!?*



ಬಿಡಿಸಿದ ಹಲಸಿನ ತೊಳೆಗಳಂದದಿ ಎಂಬುದಕ್ಕಿಂತಲೂ ಬಹಳ ಕಡಿಮೆಯದನ್ನು!

*ಎಸ್.ಜಿ.ಭಾಸ್ಕರ ರೆಡ್ಡಿ, ದೊಡ್ಡಬಳ್ಳಾಪುರ*
*ಉತ್ತರ ಸಿಗದಂತಹ ಪ್ರಶ್ನೆಗಳು ಮಾತ್ರ ಕಸದ ಬುಟ್ಟಿ ಸೇರುತ್ತವಾ?*
ಉತ್ತರ ಸಿಗದ ಪ್ರಶ್ನೆಗಳೇ ಇಲ್ಲ; ಅಸಭ್ಯ, ಅಶ್ಲೀಲ, ಅಪ್ರಸ್ತುತ ಪ್ರಶ್ನೆಗಳು ಮಾತ್ರ ಕ.ಬು.ವಿನ ಆಹಾರ.

*ಎಸ್.ಶ್ರೀಧರ್, ಬೆಂಗಳೂರು*
*ಕೆಲಸಗಳನ್ನು ಮಾಡಿಸಿಕೊಂಡು, ನಂತರ ನೀನು ಮಾಡಿದ್ದು ಸರಿಯಿಲ್ಲ ಎನ್ನುವವರಿಗೆ ಏನೆನ್ನಬೇಕು?*
ಬಾಸ್!

■ ರಾಮ್